ಹಂತಹಂತವಾಗಿ ಮೇಲ್ಕಂಡ ಕೈಗಾರಿಕಾ ಪ್ರದೇಶ ಸ್ಥಾಪಿಸುವ ಬಗ್ಗೆ ಯೋಜಿಸಿಲಾಗಿದೆ. ಜಿಲ್ಲಾವಾರು ಹೊಸ ಕೈಗಾರಿಕಾ ಪ್ರದೇಶಗಳ ವಿವರ ಹಾಗೂ ವಿಸ್ತೀರ್ಣ ಈ ಕೆಳಗಿನಂತಿದೆ:

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ವಿಸ್ತೀರ್ಣ
1.	ಬೆಂಗಳೂರು ನಗರ	ಅನೇಕಲ್	685-36
2.	ಬೆಂಗಳೂರು (ಗ್ರಾ)	ಬೆಂಗಳೂರು ದಕ್ಷಿಣ	727-34
3.	ತುಮಕೂರು	ರಾಮನಗರ (ಬಿಡದಿ)	836-29
4.	ಶಿವಮೊಗ್ಗ	ಶಿವಮೊಗ್ಗ	128-02
5.	ಗುಲ್ಬರ್ಗಾ	ಗುಲ್ಬರ್ಗಾ	22-36
6.	ದಕ್ಷಿಣ ಕನ್ನಡ	ಮಂಗಳೂರು	385-03
7.	ಧಾರವಾಡ	ಧಾರವಾಡ	116-04
8.	ಬಿಜಾಪುರ	ಬಿಜಾಪುರ	202-09
9.	ಬಾಗಲಕೋಟಿ	ಬಾಗಲಕೋಟಿ	400-00
		ಒಟ್ಟು :	3,760-60 ಎಕರೆ

ಹಾಸನ ವಿಧಾನ ಸಭಾ ಕ್ಷೇತ್ರದ ದೇವಸ್ಥಾನಗಳ ದುರಸ್ತಿ

1404 (1626) ಶ್ರೀ ಹನುಮೇಗೌಡ ಕೆ.ಹೆಚ್ (ಹಾಸನ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ವಿಧಾನ ಸಭಾ ಕ್ಷೇತ್ರದ ಶಾಂತಿಗ್ರಾಮ ಹೋಬಳಿಯ ಕಣಿವೆ ಬ್ಯಾಡರಹಳ್ಳಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ಮತ್ತು ಶ್ರೀ ಲಕ್ಷ್ಮಿ ದೇವಿ ದೇವಸ್ಥಾನಗಳ ದುರಸ್ಥಿಗೆ ಇಲಾಖೆಯಿಂದ ಸಹಾಯಧನ ಮನವಿ ಮಾಡಿಕೊಂಡಿರುವುದು ನಿಜವಲ್ಲವೇ?

2) ಈ ಬಾಬ್ತು ಸರ್ಕಾರ ಸಹಾಯಧನ ಮಂಜೂರು ಮಾಡುವುದೇ?

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

1) ಶ್ರೀ ಆಂಜನೇಯ ಮತ್ತು ಲಕ್ಷ್ಮಿ ದೇವಿ ದೇವಸ್ಥಾನದ ದುರಸ್ಥಿಗೆ ಧನ ಸಹಾಯ ಕೋರಿ ಜಿಲ್ಲಾಧಿಕಾರಿ ಹಾಸನ ಇವರು 1994ರಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು ಈ ಬಗ್ಗೆ ಸರ್ಕಾರವು ತನ್ನ ಆದೇಶ ಸಂಖ್ಯೆ: ಕಂಇ 60 ಮುಆಬಿ 94, ದಿ: 31-3-95ರಲ್ಲಿ ಶ್ರೀ ಆಂಜನೇಯ ಸ್ವಾಮಿ ಮತ್ತು ಲಕ್ಷ್ಮಿ ದೇವಸ್ಥಾನ ಬ್ಯಾಡರಹಳ್ಳಿ, ಹಾಸನ ರೂ. 15.000ಗಳು ಮಂಜೂರು ಮಾಡಿರುತ್ತದೆ.